# ? ಕೇಳಿ ತಿಳಿಯಿರಿ ☆

[ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದಜಿ. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು]

**? ಭಗವಾನ್ ಶ್ರೀರಾಮಕೃಷ್ಣರು ತಮ್ಮ ಮಹಾಸಮಾಧಿಗೆ ಸ್ವಲ್ಪ ಮೊದಲು, ಶರೀರಧರ್ಮಕ್ಕೆ ಮಣಿದು ನರಳುತ್ತಿದ್ದುದನ್ನು ಕಂಡ ಸ್ವಾಮಿ ವಿವೇಕಾನಂದರು ತಮ್ಮ ಮನದಲ್ಲಿ "ಇವರು ಈಗ ತಾವು ಅವತಾರ ಪುರುಷರು ಅಂದರೆ ನಂಬಬಹುದು" ಎಂದುಕೊಂಡರು. ಇದನ್ನು ಅರಿತುಕೊಂಡ ಶ್ರೀರಾಮಕೃಷ್ಣರು "ನರೇನ್, ನಿನಗೆ ಇನ್ನೂ ಸಂಶಯವೇ? ಅಂದಿನ ರಾಮ, ಕೃಷ್ಣ ಈಗ ಈ ಶರೀರದಲ್ಲೇ ಇದ್ದಾರೆ, ಆದರೆ ನಿನ್ನ ವೇದಾಂತದ ದೃಷ್ಟಿಯಿಂದ ಅಲ್ಲ" ಅಂತಾರಲ್ಲವೇ? ಈ 'ವೇದಾಂತದ ದೃಷ್ಟಿ' ಎನ್ನುವುದೇನೋ, ವಿಶದವಾಗಿ ತಿಳಿಸುವಂತೆ ಪ್ರಾರ್ಥಿಸುತ್ತೇನೆ.**

—ಗಿರಿಜಾದೇವಿ, ಮೈಸೂರು

ವೇದಾಂತವೆಂದರೆ ಒಂದು ಸಿದ್ಧಾಂತ. ಸಿದ್ಧಾಂತವು ವಿಚಾರವನ್ನು ಅಂದರೆ ಬುದ್ಧಿಯ ಕಸರತ್ತನ್ನೇ ಅವಲಂಬಿಸಿರುತ್ತದೆ. ಆದರೆ ಅವತಾರ ವಿಷಯವು ಸಾಮಾನ್ಯ ಬುದ್ಧಿಗೆ ಗ್ರಾಹ್ಯವಾದುದಲ್ಲ ಎಂಬುದು ಶ್ರೀರಾಮಕೃಷ್ಣರ ಮಾತಿನ ಅಭಿಪ್ರಾಯವಿರಬಹುದು. ಬುದ್ಧಿಗ್ರಾಹ್ಯ ವಿಷಯಗಳೇ ಬೇರೆ, ಭಾವಗ್ರಾಹ್ಯ ವಿಷಯಗಳೇ ಬೇರೆ. ಎಷ್ಟೋ ಅನುಭವಾತ್ಮಕವಾದ ವಿಷಯಗಳು ಬುದ್ಧಿಯನ್ನು, ತರ್ಕದ ತೆಕ್ಕೆಯನ್ನು ಮೀರಿದುವು—ಸಾಮಾನ್ಯ ಭೌತಿಕ ವಿಷಯಗಳೂ ಕೂಡ. ಈ ಪ್ರಪಂಚದಲ್ಲಿ ನಾವು ಎಲ್ಲವನ್ನೂ ಅರ್ಥಮಾಡಿಕೊಳ್ಳಲಾಗುವುದಿಲ್ಲ. ನಮಗೆ ಅರ್ಥವಾಗದ ವಿಷಯಗಳೇ ಅತ್ಯಧಿಕ. ವಿಶೇಷವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅನೇಕ ವಿಷಯಗಳನ್ನು ಶ್ರದ್ಧೆಯ ಆಧಾರದ ಮೇಲೆಯೇ ಸ್ವೀಕರಿಸಬೇಕಾಗುತ್ತದೆ. ಅವುಗಳಲ್ಲಿ ಈ ಅವತಾರ ತತ್ತ್ವವೂ ಒಂದು.

ವೇದಾಂತವೆಂದರೆ ಅದ್ವೈತವನ್ನೇ ಶ್ರೀರಾಮಕೃಷ್ಣರು ಮನಸ್ಸಿನಲ್ಲಿಟ್ಟುಕೊಂಡಿದ್ದರು ಎಂದು ಅರ್ಥೈಸಿದರೆ, ಎಲ್ಲವೂ ಪರಬ್ರಹ್ಮವೇ. ಈ ದೃಷ್ಟಿಯಿಂದ ನೋಡಿದಾಗ ಯಾರು ಬೇಕಾದರೂ 'ನಾನು ರಾಮ, ಕೃಷ್ಣ' ಎಂದು ಹೇಳಬಹುದು. ಅಲ್ಲಿ ವಿಶೇಷ ಆವಿರ್ಭಾವಕ್ಕೆ ಆಸ್ಪದವಿಲ್ಲ. 'ನಾನು ಹೇಳುತ್ತಿರುವುದು ಆ ದೃಷ್ಟಿಯಿಂದಲ್ಲ,' ಎಂದು ಶ್ರೀರಾಮಕೃಷ್ಣರು ನಿರ್ದೇಶಿಸುತ್ತಿದ್ದಾರೆ. ಈ ಸಂಬಂಧವಾಗಿ ಶ್ರೀರಾಮಕೃಷ್ಣರ ನೇರಶಿಷ್ಯರಾದ ಸ್ವಾಮಿ ತುರೀಯಾನಂದಜಿಯವರ ಒಂದು ಪತ್ರ ಉಲ್ಲೇಖಾರ್ಹ. **(ಬದಿಯಲ್ಲಿನ ಪುಟವನ್ನು ನೋಡಿ)**


***Statement about ownership and other particulars about Viveka Prabha (according to Form IV Rule 8, circulated by Registrar of Newspapers for India).***

| | | |
|---|---|---|
| 1. | Place of Publication | : **Mysore 570 020** |
| 2. | Periodicity of Publication | : **Monthly** |
| 3. | Printer's Name | : **J B Pattabhi** |
| | Nationality | : **Indian** |
| | Address | : **Pattabi Enterprises Ramaviiasa Road, Mysore** |
| 4. | Publisher's Name | : **Swami Nityasthananda** |
| | Nationality | : **Indian** |
| | Address | : **Sri Ramakrishna Ashrama, Yadavagiri, Mysore 570 020** |
| 5. | Editor's Name | : **Swami Atmajnananda** |
| | Nationality | : **Indian** |
| | Address | : **Sri Ramakrishna Ashrama Yadavagiri Mysore 570 020** |
| 6. | Name & Addresses of the individuals who own the newspaper and partners or share-holders holding more than 1% of the capital | : **Sri Ramakrishna Ashrama Yadavagiri Mysore 570 020** |

**I, Swami Nityasthananda, hereby declare that the particulars given above are true to the best of my knowledge and belief.**

*Sd.*
***Swami Nityasthananda***
Signature of the Publisher

01.03.2006

## ಸ್ವಾಮಿ ತುರೀಯಾನಂದಜಿಯವರ ಒಂದು ಪತ್ರ

ವಾರಾಣಸಿ

೧೯ ಜನವರಿ ೧೯೨೦

ಪ್ರೀತಿಯ ರಮೇಶ,

ಜನವರಿ ೧೨ರ ನಿನ್ನ ಪತ್ರ ಬಂದು ತಲುಪಿತು. ನೀನು ಈ ಪತ್ರವನ್ನು ಸ್ವಾಮಿ ಶಾರದಾನಂದರಿಗೆ ಬರೆದಿದ್ದರೆ ಹೆಚ್ಚು ಸಮಂಜಸವಾಗಿರುತ್ತಿತ್ತು ಕಾರಣ, **ಶ್ರೀರಾಮಕೃಷ್ಣ ಲೀಲಾಪ್ರಸಂಗ**ದ ಕರ್ತೃ ಅವರು. ಆ ಗ್ರಂಥಕ್ಕೆ ಸಂಬಂಧಿಸಿದ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಅವರು ನೀಡುತ್ತಿದ್ದರು. ಇರಲಿ, ನಿನ್ನ ಪ್ರಶ್ನೆಯಲ್ಲಿನ ಅಂಶವನ್ನು ನನ್ನ ಕೈಯಲ್ಲಿ ಸಾಧ್ಯವಾದ ಮಟ್ಟಿಗೆ ಉತ್ತರಿಸಲು ಪ್ರಯತ್ನಿಸುತ್ತೇನೆ.

ಶ್ರೀರಾಮಕೃಷ್ಣರು ಹೇಳುತ್ತಿದ್ದರು—ತಮಗೆ ಎಂದಿಗೂ ಮುಕ್ತಿ ಎಂಬುದು ಇಲ್ಲವೆಂದು. ಈ ಮಾತನ್ನು ನಾನು ಅವರ ಬಾಯಿಂದಲೇ ಕೇಳಿದ್ದೇನೆ. ಇಲ್ಲಿ ಮುಕ್ತಿ ಎಂದರೆ ನಿರ್ವಾಣ ಮುಕ್ತಿ. ಅಂದರೆ ಇಂತಹ ಮುಕ್ತಿಯನ್ನು ಪಡೆದ ಮೇಲೆ ಈ ಸಂಸಾರದಲ್ಲಿ ಮತ್ತೆ ಹುಟ್ಟಬೇಕಿಲ್ಲ. ಜೀವಕೋಟಿಗಳು (ಅಂದರೆ ಸಾಮಾನ್ಯ ಜೀವಿಗಳು) ಈ ಸಂಸಾರದ ದುಃಖ ಕೋಟಲೆಗಳಿಂದ ತೀವ್ರವಾಗಿ ಘಾಸಿಗೊಂಡು ಮತ್ತೆ ಈ ಸಂಸಾರದಲ್ಲಿ ಹುಟ್ಟಲು ಬಯಸುವುದಿಲ್ಲ. ಈ ದುಃಖ ಕೋಟಲೆಗಳಿಂದ ಎಂದೆಂದಿಗೂ ಪಾರಾಗಲು ಪರಿತಪಿಸುತ್ತಾರೆ. ಆದ್ದರಿಂದಲೇ ಅವರು ನಿರ್ವಾಣಕ್ಕಾಗಿ ಸಾಧನೆಗೈಯುವುದು. ನಿರ್ವಾಣ ಎಂದರೆ, ನಿರ್=ಇಲ್ಲದಿರುವುದು, ವನ=ಶರೀರ; (ವನ ಎಂದರೆ ಗೃಹವೆಂದೂ ಅರ್ಥವಿದೆ. ಆತ್ಮಕ್ಕೆ ಈ ಶರೀರವೇ ಮನೆಯಾದ್ದರಿಂದ 'ವನ' ಎಂದರೆ ಶರೀರವೂ ಆಗುತ್ತದೆ). ನಿರ್ವಾಣ ಮುಕ್ತಿ ಎಂದರೆ ಆ ವ್ಯಕ್ತಿ ಇನ್ನು ಮುಂದೆ ಮತ್ತೆಂದೂ ದೇಹ ಧರಿಸುವುದಿಲ್ಲ.

ಯಾರು ತಮ್ಮ ಅದಮ್ಯವಾದ ಕರುಣೆಯಿಂದ ಜಗತ್ಕಲ್ಯಾಣವನ್ನು ಮಾಡಲು ಮತ್ತೆ ಮತ್ತೆ ಜಗತ್ತಿಗೆ ಬರಬೇಕಾಗುತ್ತದೋ ಅಂತಹವರಿಗೆ ಆತ್ಯಂತಿಕ ನಿರ್ವಾಣ ಎಂಬುದು ಹೇಗೆ ಸಾಧ್ಯ? ಆದ್ದರಿಂದಲೇ ಶ್ರೀರಾಮಕೃಷ್ಣರು ಸ್ವಾಮಿ ವಿವೇಕಾನಂದರಿಗೆ ಹೇಳಿದರು: "ಯಾರು ರಾಮನೋ ಮತ್ತು ಕೃಷ್ಣನೋ ಅವನೇ ಈಗ ಈ ದೇಹದಲ್ಲಿ ಶ್ರೀರಾಮಕೃಷ್ಣನಾಗಿದ್ದಾನೆ; ಆದರೆ ಅದು ನಿನ್ನ ವೇದಾಂತದ ದೃಷ್ಟಿಯಿಂದಲ್ಲ." ಇಲ್ಲಿ ಒತ್ತು ನೀಡಲಾಗಿರುವ ಅಂಶವೆಂದರೆ, ವೇದಾಂತದ ಅದ್ವೈತ ಸಿದ್ಧಾಂತವು ಜೀವ ಮತ್ತು ಬ್ರಹ್ಮ ಒಂದೇ ಎಂದು ಪ್ರತಿಪಾದಿಸುತ್ತದೆ. ಈ ಸಿದ್ಧಾಂತವನ್ನು ಕೆಲವರು ತಾವೂ ರಾಮ, ಕೃಷ್ಣರಿಗೆ ಸಮ ಹಾಗೂ ರಾಮ, ಕೃಷ್ಣ ಮುಂತಾದ ಅವತಾರಪುರುಷರಿಗೆ ಯಾವ ವಿಶಿಷ್ಟವಾದ ಗುಣಗಳೂ ಇರಲಿಲ್ಲ ಎಂದು ಅರ್ಥೈಸುತ್ತಾರೆ. ಸ್ವಾಮಿ ವಿವೇಕಾನಂದರಿಗೆ ಹೇಳಿದ, "ಯಾರು ರಾಮನೋ, ಯಾರು ಕೃಷ್ಣನೋ ಅವನೇ ಈ ದೇಹದಲ್ಲಿ ರಾಮಕೃಷ್ಣ" ಎಂಬ ಮಾತು ಅಪಾರ್ಥವಾಗದಿರಲೆಂದು, ಶ್ರೀರಾಮಕೃಷ್ಣರು ತಮ್ಮ ಹೇಳಿಕೆಗೆ ಒಂದು ವಿಶೇಷಣವನ್ನು ಸೇರಿಸಿದರು—"ನಿನ್ನ ವೇದಾಂತದ ದೃಷ್ಟಿಯಿಂದಲ್ಲ ಇದು" ಎಂದು.

ಅಂದರೆ ಶ್ರೀರಾಮಕೃಷ್ಣರ ಚೈತನ್ಯವು ಪರಬ್ರಹ್ಮನ ಅಂದರೆ ಜಗದೀಶ್ವರನ ಪರಮಚೈತನ್ಯದಂತೆಯೇ ಹೊರತು, ಜೀವಿಯ ಚೈತನ್ಯದಂತೆ ಅಲ್ಲ. ಅದ್ವೈತ ವೇದಾಂತದ ಪ್ರಕಾರ, ಜೀವನು ತನ್ನನ್ನು ಮುಸುಕಿಕೊಂಡಿರುವ ಅಜ್ಞಾನವನ್ನು ಆಧ್ಯಾತ್ಮಿಕ ಸಾಧನೆಯ ಮೂಲಕ ತೆಗೆದುಹಾಕಿ ಬ್ರಹ್ಮನೊಡನೆ ತಾದಾತ್ಮ್ಯವನ್ನು ಪಡೆಯಬಹುದು. ಆದರೂ, ಎಂತಹ ಭಗೀರಥ ಪ್ರಯತ್ನದಿಂದಲೂ ಯಾವುದೇ ಜೀವನೂ ಪರಬ್ರಹ್ಮ ಅಥವಾ ಜಗದೀಶ್ವರನಾಗಲು ಸಾಧ್ಯವೇ ಇಲ್ಲ. ಯಾರು ಜಗದೀಶ್ವರನೋ ಅವನು ಸನಾತನವಾಗಿಯೂ ಜಗದೀಶ್ವರನೇ. ಅವನು ಮಾನವ ದೇಹವನ್ನು ಧರಿಸಿ ಜೀವನಂತೆ ತೋರ್ಪಡಿಸಿಕೊಂಡರೂ ಅವನು ಅದೇ ಜಗದೀಶ್ವರನಾಗಿರುತ್ತಾನೆಯೇ ಹೊರತು ಎಂದಿಗೂ ಜೀವನಾಗುವುದಿಲ್ಲ.

ಭಗವಾನ್ ಶ್ರೀಕೃಷ್ಣನು ಗೀತೆಯಲ್ಲಿ ಹೀಗೆನ್ನುತ್ತಾನೆ: **ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ । ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥ ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ । ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥** "ನನಗೆ ಅನೇಕ ಜನ್ಮಗಳು ಕಳೆದುಹೋಗಿವೆ; ಅಂತೆಯೇ ನಿನಗೂ ಸಹ. ಎಲೈ ಪರಂತಪನೇ, ನಾನು ಅವುಗಳನ್ನೆಲ್ಲಾ ತಿಳಿದಿದ್ದೇನೆ, ನೀನು ತಿಳಿದಿಲ್ಲ. ನಾನು ಜನ್ಮರಹಿತನೂ, ಅವ್ಯಯ-ಸ್ವಭಾವವುಳ್ಳವನೂ, ಪ್ರಾಣಿಗಳಿಗೆ ನಿಯಾಮಕನೂ ಆಗಿದ್ದರೂ ನನ್ನ ಪ್ರಕೃತಿ ಯನ್ನು ಆಶ್ರಯಿಸಿ, ನನ್ನ ಮಾಯೆಯ ಮೂಲಕ ಅವತರಿಸುತ್ತೇನೆ." (ಭಗವದ್ಗೀತೆ, ೪.೫-೬). ಅದರಂತೆಯೇ ಭಗವಾನ್ ಶ್ರೀರಾಮಕೃಷ್ಣರೂ ಸಹ "ನಿನ್ನ ವೇದಾಂತದ ದೃಷ್ಟಿಯಿಂದಲ್ಲ" ಎಂದು ಹೇಳಿ, ಶ್ರೀಕೃಷ್ಣ ಹೇಳಿದ ಮಾತನ್ನೇ ಮತ್ತೊಮ್ಮೆ ದೃಢಪಡಿಸಿದರು.